# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

ಸಂಖ್ಯೆ:ಆರ್6/ಚ.ಚಿ.ಪ./ಅಧಿ.01/2018-19 ದಿನಾಂಕ: 23.11.2018

## ಅಧಿಸೂಚನೆ

ವಿಷಯ: ಮೇ 2019ರಲ್ಲಿ ನಡೆಯುವ ಚಲನಚಿತ್ರ ನಟನೆ, ಹಿನ್ನಲೆ ಗಾಯನ, ವಾದ್ಯ ಸಂಗೀತ ಪರೀಕ್ಷೆಗಳಿಗೆ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

***

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2019ನೇ ಸಾಲಿನ ಮೇ ತಿಂಗಳಲ್ಲಿ ಚಲನಚಿತ್ರ ನಟನೆ, ಹಿನ್ನಲೆ ಗಾಯನ, ವಾದ್ಯ ಸಂಗೀತ ಪರೀಕ್ಷೆಗಳನ್ನು ಸಂಘಟಿಸುವ ಬಗ್ಗೆ ಕ್ರಿಯಾ ಯೋಜನೆ ರೂಪಿಸಲಾಗಿದೆ ಆದ್ದರಿಂದ **ನಿಮ್ಮ ಸಂಸ್ಥೆಯ ಅಭ್ಯರ್ಥಿಗಳ ದಾಖಲಾತಿ ಪಟ್ಟಿಯನ್ನು ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ರವರಿಂದ ಅನುಮೋದನೆಯನ್ನು ಪಡೆದು ಮಂಡಳಿಗೆ ಸಲ್ಲಿಸುವುದು.** ಈ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕೆಳಕಾಣಿಸಿರುವ ಪರೀಕ್ಷಾ ಶುಲ್ಕವನ್ನು ನಿಗಧಿಗೊಳಿಸಿದೆ. ಮಾನ್ಯತೆ ಪಡೆಯದ ಸಂಸ್ಥೆಯಿಂದ ಬಂದಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಸರ್ಕಾರದಿಂದ ಅನುಮತಿ ನೀಡಲಾದ ವಿಷಯಗಳಿಗೆ ಮಾತ್ರ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸುವುದು. ಹೀಗೆ ಅರ್ಜಿ ಸಲ್ಲಿಸುವಾಗ ಸರ್ಕಾರಿ ಆದೇಶದ ಜೆರಾಕ್ಸ್ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸುವುದು. ಇಲಾಖಾ ನಿಯಮಾನುಸಾರ ವಿದ್ಯಾರ್ಥಿಗಳ ಹಾಜರಾತಿ/ದಾಖಲಾತಿ ಕಡ್ಡಾಯವಾಗಿರುತ್ತದೆ.

   ಅನುಮೋದನಾ ಪ್ರಾಧಿಕಾರ ನಿಗಧಿ ಪಡಿಸುವ ದಾಖಲಾತಿ ಮಿತಿಗೆ ಬದ್ಧರಾಗಿರುವುದು ಕಡ್ಡಾಯವಾಗಿರುತ್ತದೆ.

| ಪರೀಕ್ಷಾ ವಿಷಯಗಳ ವಿವರ | ಪರೀಕ್ಷಾ ಶುಲ್ಕದ ವಿವರ |
|---|---|
| 1. ಚಲನಚಿತ್ರ ನಟನೆ ಮತ್ತು ಹಿನ್ನಲೆ ಗಾಯನ/ವಾದ್ಯ ಸಂಗೀತ | ರೂ. 1300-00 (ಪ್ರತಿ ವಿದ್ಯಾರ್ಥಿಗೆ) |
| 2. ಸಂಸ್ಥೆಯ ನೋಂದಣಿ ಶುಲ್ಕ | ರೂ. 1000-00 |

   ಪರೀಕ್ಷಾ ಮಂಡಳಿಯ ಎಲ್ಲಾ ಶುಲ್ಕವನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನೆಫ್ಟ್ ಚಲನ್ ಮೂಲಕ ಪಾವತಿಸುವಂತೆ ಜಾರಿಗೆ ತರಲಾಗಿದೆ. ಅದರಂತೆ ಸಂಸ್ಥೆಯ ಪ್ರಾಚಾರ್ಯರುಗಳು ವಿದ್ಯಾರ್ಥಿಗಳಿಂದ ಪಡೆದ ಪರೀಕ್ಷಾ ಶುಲ್ಕದ ಮೊಬಲಗಿಗೆ ನೆಫ್ಟ್ ಚಲನ್ ಮೂಲಕ ಶುಲ್ಕ ಪಾವತಿಸಿ ಮೂಲ ಚಲನ್‌ನ್ನು ನಾಮಿನಲ್ ರೋಲ್‌ನೊಂದಿಗೆ ಮೇಲೆ ತಿಳಿಸಿರುವ ದಿನಾಂಕದೊಳಗೆ ನೇರವಾಗಿ **ಶ್ರೀಮತಿ ಶೋಭ ಜೆ.ಆರ್, ಸಹಾಯಕ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03** ಈ ವಿಳಾಸಕ್ಕೆ ಕಳುಹಿಸುವುದು. ನೆಫ್ಟ್ ಚಲನ್ ಲಗತ್ತಿಸದೇ ಇದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಶುಲ್ಕ ಪಾವತಿಸಲು ಅನುಕೂಲವಾಗುವಂತೆ ನೆಫ್ಟ್ ಚಲನ್ ಪ್ರತಿಯನ್ನು ಇದರೊಂದಿಗೆ ರವಾನಿಸಿದೆ. ಅಗತ್ಯವಿದ್ದಲ್ಲಿ ನೆಫ್ಟ್ ಚಲನ್‌ನ್ನು ಜೆರಾಕ್ಸ್ ಮಾಡಿಸಿಕೊಳ್ಳುವುದು.

2. ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಕೆಳಕಂಡಂತೆ ದಿನಾಂಕಗಳನ್ನು ಗೊತ್ತುಪಡಿಸಿದೆ.

| | |
|---|---|
| 1. ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆ ದಿನಾಂಕ | 17.12.2018 |
| 2. ಸಂಸ್ಥೆಯವರು ಪರೀಕ್ಷಾ ಶುಲ್ಕ ಪಾವತಿಸಿ ನೆಫ್ಟ್ ಚಲನ್ ಪಡೆಯಲು ಕೊನೆ ದಿನಾಂಕ | 19.12.2018 |
| 3. ನೆಫ್ಟ್ ಚಲನ್ ಹಾಗೂ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ತಲುಪುವಂತೆ ಸಲ್ಲಿಸಲು ಕೊನೆ ದಿನಾಂಕ | 27.12.2018 |
| 4. ದಿನಾಂಕ: 17.12.2018ರಿಂದ 07.01.2019ರವರೆಗೆ ಪ್ರತಿ ವಿದ್ಯಾರ್ಥಿಗೆ ರೂ.150-00ರಂತೆ ದಂಡಶುಲ್ಕದೊಂದಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಂತಿಮ ದಿನಾಂಕ | 07.01.2019 |
| 5. ದಂಡಶುಲ್ಕದೊಂದಿಗೆ ಪಾವತಿಸಿದ ಶುಲ್ಕವನ್ನು ನೆಫ್ಟ್ ಚಲನ್ ಮೂಲಕ ಜಮಾ ಮಾಡುವ ದಿನಾಂಕ | 09.01.2019 |
| 6. ದಂಡ ಶುಲ್ಕ ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳು/ಪೂರಕ ದಾಖಲೆ ಹಾಗೂ ನೆಫ್ಟ್ ಚಲನ್‌ನ್ನು ಮಂಡಳಿಗೆ ಸಲ್ಲಿಸುವ ದಿನಾಂಕ | 11.01.2019 |

3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ಹಾಗೂ ಅರ್ಜಿ ಶುಲ್ಕದಿಂದ ವಿನಾಯಿತಿ ಇದೆ. ಆದರೆ ದಂಡದಿಂದ ವಿನಾಯಿತಿ ಇರುವುದಿಲ್ಲ.

4. ಮಾನ್ಯತೆ ಪಡೆದ ಚಲನಚಿತ್ರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಮಂಡಳಿಯಿಂದ ನೀಡಿರುವ ಅರ್ಜಿ ನಮೂನೆಗಳನ್ನು ಉಪಯೋಗಿಸಬೇಕು ಹಾಗೂ ಮೂರು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರಗಳನ್ನು ಪಡೆದು ಪ್ರಾಂಶುಪಾಲರವರಿಂದಲೇ ದೃಢೀಕರಿಸಿ ಒಂದನ್ನು ಅರ್ಜಿಗೆ ಅಂಟಿಸಿ ಉಳಿದೆರಡನ್ನು ಬೇರೆಯಾಗಿ ಒಂದು ಆಲ್ಬಂ ತಯಾರಿಸಿ ಕಳುಹಿಸಬೇಕು. ಪುನರಾವರ್ತಿತ ಅಭ್ಯರ್ಥಿಗಳು ಸಹ ಮಂಡಳಿಯಿಂದ ನೀಡಿರುವ ಅರ್ಜಿಗಳನ್ನೇ ಉಪಯೋಗಿಸಬೇಕು.

**ಸೂಚನೆ:**– ಅರ್ಜಿಗಳನ್ನು ಮತ್ತು ಭಾವಚಿತ್ರಗಳನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ಸಲ್ಲಿಸುವುದು.

(ಕೆ.ಎಸ್.ಮಣಿ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಇವರಿಗೆ.**

1. ಪ್ರಾಂಶುಪಾಲರು, ಆದರ್ಶ ಫಿಲಂ ಮತ್ತು ಟಿವಿ ಇನ್‌ಸ್ಟಿಟ್ಯೂಟ್, ರಾಜಾಜಿನಗರ, ಬೆಂಗಳೂರು–560010
2. ಪ್ರಾಂಶುಪಾಲರು, ವಿಜಯ ಫಿಲಂ ಇನ್‌ಸ್ಟಿಟ್ಯೂಟ್, ಬಸವೇಶ್ವರ ನಗರ, ಬೆಂಗಳೂರು–560079
3. ಕಛೇರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ**

1. ನಿರ್ದೇಶಕರು, ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ